ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ದರಖಾಸ್ತು ಮೂಲಕ ಜಮೀನು ಮಂಜೂರಾತಿ ಬಗ್ಗೆ

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) -

1099 (1146) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ ನಗರಸಭೆ/ಪುರಸಭೆ/ಪಟ್ಟಣ ಪಂಚಾಯತ್ ವ್ಯಾಪ್ತಿಯಿಂದ ಎಷ್ಟು ಕಿ,ಮೀ. ಅಂತರದ ಒಳಗೆ ದರಖಾಸ್ತು ಮೂಲಕ ಜಮೀನು ಮಂಜೂರಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ;

(ಆ) ಈ ಹಿಂದೆ ನಗರಸಭೆ/ಪುರಸಭೆವ್ಯಾಪ್ತಿಗಳಲ್ಲಿ ಅರ್ಜಿ ಸಲ್ಲಿಸಿದ ದಿನಾಂಕ/ಸ್ವೀಕರಿಸಿರುವ ನಮೂನೆ-50, ನಮೂನೆ-53 ನಮೂನೆ-57ರ ಅರ್ಜಿಗಳು ಎಷ್ಟು;

(ಇ) ಈ ಪೈಕಿ ನಗರಸಭೆ/ಪುರಸಭೆ ವ್ಯಾಪ್ತಿಗೆ ಒಳಪಡುತ್ತದೆ ಎಂಬ ಕಾರಣ ನೀಡಿ ತಿರಸ್ಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; ತೀರ್ಮಾನ ಕೈಗೊಳ್ಳದೆ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು;

(ಈ) ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಮೂನೆ-50 ಮತ್ತು ನಮೂನೆ-53ರ ಅರ್ಜಿಗಳನ್ನುಸಮಿತಿಯಲ್ಲಿ ಅನುಮೋದಿಸಿ ಇನ್ನು ಸಾಗುವಳಿ ಚೀಟಿ ನೀಡದಿರುವ ಪ್ರಕರಣಗಳು ಎಷ್ಟು; ಹಾಗೂ ನೀಡದೆ ಇರಲು ಕಾರಣಗಳೇನು?